# ಗುರುವಾದ ದೊಣ್ಣೆ

ಸ್ವಾಮಿ ಶಾರದಾನಂದಜಿ ಅವರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರು. ಹರಿದ್ವಾರ ಮತ್ತು ಹೃಷೀಕೇಶಗಳಲ್ಲಿ ಸಾಧನೆ–ಭಜನೆಗಳಲ್ಲಿ ನಿರತರಾಗಿದ್ದ ಸಮಯದಲ್ಲಿ ಅವರು ಒಬ್ಬ ವೃದ್ಧ ಸಾಧುವನ್ನು ನೋಡಿದ್ದರು. ಆ ಸಾಧು ಮಹಾತ್ಯಾಗಿಯಾಗಿದ್ದರು; ಆನಂದಮಯ ಪುರುಷರಾಗಿದ್ದರು. ಸ್ವಾಮಿ ಶಾರದಾನಂದರು ಆಗಿನ್ನೂ ಯುವಕರು, ಆ ವೃದ್ಧಸಾಧುವನ್ನು ಬಹಳ ಶ್ರದ್ಧಾಭಕ್ತಿಯಿಂದ ಅವರು ಆದರಿಸುತ್ತಿದ್ದರು. ಬೆಳಕು ಹರಿಯುವ ಮೊದಲೇ ಸ್ನಾನಾದಿಗಳನ್ನು ಮುಗಿಸಿ, ಆ ಸಾಧು ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ತಮ್ಮಲ್ಲಿದ್ದ ಭಗವದ್ಗೀತೆಯ ಒಂದು ಹಳೆಯ ಪುಸ್ತಕವನ್ನು ಚೀಲದಿಂದ ಹೊರತೆಗೆದು, ಅದರ ಪುಟಗಳತ್ತ ಕಣ್ಣಾಡಿಸುತ್ತಿದ್ದರು. ಭಗವಂತನ ಚಿಂತನೆ ಮಾಡುತ್ತಾ, ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಅವರ ಮುಖದಲ್ಲಿ ಶಾಂತಿಯ ಲಾಸ್ಯ ವನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಸ್ವಲ್ಪ ಸಮಯದ ನಂತರ, ಭಗವದ್ಗೀತೆಯ ಪುಸ್ತಕವನ್ನು ಕಣ್ಣುಗಳಿಗೆ ಒತ್ತಿಕೊಂಡು, ನಮಸ್ಕರಿಸಿ ಶ್ರದ್ಧೆಯಿಂದ ಚೀಲದಲ್ಲಿ ಮತ್ತೆ ಇಟ್ಟುಕೊಳ್ಳುತ್ತಿದ್ದರು. ಮತ್ತೊಂದು ಅಚ್ಚರಿಯ ವಸ್ತು ಏನೆಂದರೆ, ಸದಾ ಅವರ ಪಕ್ಕದಲ್ಲಿಯೇ ಇರುತ್ತಿದ್ದ, ಕಪ್ಪು ಹಿಡಿದಿದ್ದ ಒಂದು ಹಳೆಯದಾದ ಚಿಕ್ಕ ಮರದ ದೊಣ್ಣೆ. ಅದನ್ನು ಅವರು ಕೈಗೆತ್ತಿಕೊಂಡು, ಅತ್ಯಂತ ಭಕ್ತಿಯಿಂದ ತಲೆಯ ಮೇಲೆ ಇರಿಸಿಕೊಂಡು, ಹಣೆಗೆ ತಾಗಿಸಿಕೊಂಡು, ನಮಸ್ಕಾರ ಮಾಡುತ್ತಿದ್ದರು. ತದನಂತರವೇ ಅವರು ಇತರರೊಂದಿಗೆ ಮಾತನಾಡುತ್ತಿದ್ದರು.

ಸ್ವಾಮಿ ಶಾರದಾನಂದರು ಈ ತೇಜಸ್ವೀ ವೃದ್ಧಸಾಧುಗಳಿಂದ ಭಗವದ್ಗೀತೆಯ ವ್ಯಾಖ್ಯಾನವನ್ನು ಕೇಳಬಯಸಿದರು. ಅತ್ಯಂತ ಸರಳಸ್ವಭಾವದವರಾದ ಆ ಸಾಧುಗಳು ಯಾವ ಮುಚ್ಚುಮರೆಯೂ ಇಲ್ಲದೆ ಸ್ಪಷ್ಟವಾಗಿ ಹೀಗೆ ಹೇಳಿದರು: "ನಾನೊಬ್ಬ ಶತಮೂರ್ಖ. ಓದುಬರಹದ ಗಂಧವೂ ನನಗಿಲ್ಲ. ಗೀತಾಗ್ರಂಥವನ್ನು ತಲೆಕೆಳಗಾಗಿ ಹಿಡಿದು ನೋಡುತ್ತಿದ್ದರೂ ಅದರಲ್ಲಿ ಆಶ್ಚರ್ಯವಿಲ್ಲ! ಆದರೂ ಈ ಪುಣ್ಯಗ್ರಂಥವನ್ನು ಇಟ್ಟುಕೊಂಡು ಅಧ್ಯಯನ ಮಾಡುವ ಸಾಧುಗಳ ಪದ್ಧತಿಯನ್ನು ಅನುಸರಿಸುತ್ತಿದ್ದೇನೆ. ಭಗವಂತನ ಧ್ಯಾನಮಾಡುತ್ತ, ಒಂದು ಸಲ ಅದರ ಪುಟಗಳನ್ನೆಲ್ಲ ತಿರುವಿ ನೋಡುತ್ತೇನೆ. ಇನ್ನು, ಈ ದೊಣ್ಣೆಯ ಹಿಂದೆ ಒಂದು ದೊಡ್ಡ ಕತೆಯೇ ಇದೆ." ಹೀಗೆ ಹೇಳಿ ಆ ಸಾಧುಗಳು ತಮ್ಮ ಜೀವನಕತೆಯನ್ನು ಹೇಳಿದರು:

ಆ ಸಾಧುಗಳು ಹುಟ್ಟಿದ್ದು ಬ್ರಾಹ್ಮಣ ಕುಟುಂಬದಲ್ಲಿ. ಮದುವೆಯಾಗಿ ಒಬ್ಬ ಮಗನೂ ಇದ್ದ. ಜೀವನೋಪಾಯಕ್ಕೆ ಸರಿಯಾದ ಮಾರ್ಗವಿರಲಿಲ್ಲ. ಡಕಾಯತಿಯನ್ನೇ ಕಸುಬನ್ನಾಗಿ ಮಾಡಿಕೊಂಡರು. ಅವರದು ಬಲಿಷ್ಠ ಶರೀರ. ಹೀಗಾಗಿ ಆರಿಸಿಕೊಂಡ ಕಸುಬಿಗೆ ಇದು ಸಹಾಯಕವಾಗಿತ್ತು.

ಒಂದು ದಿನ ರಾತ್ರಿ ಇವರು ಮನೆಯಿಂದ ಹೊರಬಂದರು. ಮರಗಳ ಮರೆಯಲ್ಲಿ ಕಾದುನಿಂತರು. ರಸ್ತೆಯಲ್ಲಿ ಮನುಷ್ಯರ ಸುಳಿವೇ ಇಲ್ಲ. ಮನೆಯಲ್ಲಿ ಹೆಂಡತಿ, ಮಗ ಉಪವಾಸವಿದ್ದಾರೆ. ರಾತ್ರಿ ಸರಸರನೆ ಹರಿದುಹೋಗುತ್ತಿದೆ. ಅವರ ಮನಸ್ಸು ಕಳವಳಗೊಂಡಿತು. ತಟ್ಟನೆ ಸ್ವಲ್ಪದೂರದಲ್ಲಿದ್ದ ಶಿವಮಂದಿರದ ನೆನಪು ಬಂತು. ಅಲ್ಲಿಗೆ ಹೋದರೆ, ಪೂಜಾಸಾಮಗ್ರಿ ಸಿಕ್ಕಬಹುದು ಎನ್ನಿಸಿತು. ಆಸೆಯಿಂದ ಅಲ್ಲಿಗೆ ಸರಸರನೆ ಹೋದರು. ಮಂದಿರದ ಬಾಗಿಲು ಒಡೆದು ಒಳಕ್ಕೆ ನುಗ್ಗಿದರು. ಕೆಳಗೆ ಕುಳಿತು ಎರಡೂ ಕೈಗಳಿಂದ ತಡಕಾಡಿ ಹುಡುಕಿದರು. ಏನೂ ಸಿಗಲಿಲ್ಲ. ಶಿವನೊಬ್ಬ ಬೈರಾಗಿಯಲ್ಲವೇ! ಹಸಿದ ಈ ಬ್ರಾಹ್ಮಣ ಕುಪಿತರಾದರು. ತಮ್ಮ ಕೈಯಲ್ಲಿ ಹಿಡಿದಿದ್ದ ದಪ್ಪ ದೊಣ್ಣೆಯಿಂದ ಶಿವನಿಗೆ ಹೊಡೆತಗಳ ಪೂಜೆಯನ್ನೇ ಆರಂಭಿಸಿದರು. ಎರಡು ಮೂರು ನಿಮಿಷಗಳಾದ ಮೇಲೆ ಅವರಿಗೆ ಅರಿವು ಬಂದು ಯೋಚಿಸಿದರು, "ಶಿವ, ಶಿವ, ನಾನು ಇದೇನು ಮಾಡುತ್ತಿದ್ದೇನೆ?! ನಾನೊಬ್ಬ ಬ್ರಾಹ್ಮಣನಾಗಿ ಈ ಶಿವನ ದೇವಾಲಯದಲ್ಲಿ ಕಳ್ಳತನ ಮಾಡುತ್ತಿದ್ದೇನಲ್ಲ! ಎಂಥ ಅಕಾರ್ಯ ಮಾಡಿದೆ ನಾನು! ಯಾರಿಗಾಗಿ ಹೀಗೆ ಮಾಡಿದೆ?" ಹೀಗೆ ಆಲೋಚಿಸುತ್ತ, ಅವರು ದುಃಖದಿಂದ ಅಳಲು ಆರಂಭಿಸಿದರು. ಅದೇ ಕ್ಷಣದಲ್ಲಿ ಅವರಲ್ಲಿ ತೀವ್ರವಾದ ವೈರಾಗ್ಯ ಭಾವನೆ ಮೂಡಿತು. ಅದೇ ದೊಣ್ಣೆಯನ್ನು ಹಿಡಿದು, ಕಾಲೆಳೆದ ಕಡೆಗೆ ಹೊರಟೇಬಿಟ್ಟರು. ಒಂದು ಕಡೆ ಅವರಿಗೆ ಗುರುಗಳು ದೊರೆತರು. ಅವರ ಸೇವೆ ಮಾಡುತ್ತಿದ್ದು, ಕಾಲಕ್ರಮೇಣ ಅವರಿಂದಲೇ ಸಂನ್ಯಾಸವನ್ನು ಸ್ವೀಕರಿಸಿದರು. ಈಗ ಹೃಷೀಕೇಶದಲ್ಲಿ ವಾಸಮಾಡುತ್ತ, ಭಗವದಾನಂದದಲ್ಲಿ ಕಾಲವನ್ನು ಕಳೆಯುತ್ತಿದ್ದಾರೆ. ಶಿವನನ್ನು ಹೊಡೆದ ಆ ದೊಣ್ಣೆಯನ್ನು ಸ್ವಾಮಿ ಶಾರದಾನಂದರಿಗೆ ತೋರಿಸುತ್ತ ಆ ಸಾಧು ಹೀಗೆ ಹೇಳಿದರು: "ಇದೇ ನನ್ನ ಕಣ್ಣುತೆರೆಸಿದ ಗುರು; ನನ್ನ ಮಾರ್ಗದರ್ಶಕವಾದ ದಿವ್ಯಜ್ಯೋತಿ. ಇದೇ ಕಾರಣಕ್ಕಾಗಿ ನಾನು ಈ ದೊಣ್ಣೆಗೆ ಪ್ರತಿದಿನ ಕೃತಜ್ಞತಾಪೂರ್ವಕವಾಗಿ ಭಕ್ತಿಯಿಂದ ಪ್ರಣಾಮ ಮಾಡುತ್ತೇನೆ."

*(ಮಹೇಂದ್ರನಾಥ ದತ್ತರ ಬಂಗಾಳಿ ಭಾಷೆಯ 'ಶ್ರೀಮತ್ ವಿವೇಕಾನಂದ ಸ್ವಾಮೀಜೀರ್ ಜೀವನೇರ್ ಘಟನಾವಳಿ' ಪುಸ್ತಕದಿಂದ: ಅನುವಾದ : ಶ್ರೀಮತಿ ಗಿರಿಜಾದೇವಿ, ವಾರಾಣಸಿ)*



ಸ್ವಾಮಿ ನಿತ್ಯಸ್ಥಾನಂದ

# ಭಗವದ್ಗೀತಾ ತತ್ತ್ವಸೌರಭ



ಭಗವದ್ಗೀತೆಯು ಸಕಲ ಉಪನಿಷತ್ತುಗಳ ಸಾರಸಂಗ್ರಹವಾಗಿದೆ. ಅನುಷ್ಠಾನಪರವಾದ ಈ ಪವಿತ್ರಗ್ರಂಥದಲ್ಲಿ ಬರುವ ಹಲವು ವಿಷಯಗಳ ಶಾಸ್ತ್ರೀಯವಾದ ವಿಶ್ಲೇಷಣೆಯನ್ನು ಪೂಜ್ಯ ಸ್ವಾಮೀಜಿಯವರು ಮಾಡಿಕೊಟ್ಟಿದ್ದಾರೆ. ಈ ಹಿಂದೆ ಪ್ರಕಟವಾಗುತ್ತಿದ್ದ ಈ ಸರಣಿ ಲೇಖನಮಾಲೆಯನ್ನು ಈಗ ಪುನಃ ಆರಂಭಿಸುತ್ತಿದ್ದೇವೆ. ಇದಕ್ಕೆ ಅನುಮತಿ ನೀಡಿರುವ ಸ್ವಾಮೀಜಿಯವರಿಗೆ ಧನ್ಯವಾದಗಳು. ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿರುವ ಬ್ರಹ್ಮಚಾರಿಗಳ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 'ವಿವೇಕಪ್ರಭ' ಪತ್ರಿಕೆಯ ಪ್ರಥಮ ಸಂಪಾದಕರಾಗಿದ್ದ ಇವರು, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದರು. ಕನ್ನಡದಲ್ಲಿ ಹಲವಾರು ಕೃತಿಗಳನ್ನು ರಚಿಸಿರುವ ಸ್ವಾಮೀಜಿಯವರು ಪ್ರಬುದ್ಧ ಚಿಂತಕರು ಮತ್ತು ಉತ್ತಮ ವಾಗ್ಮಿಗಳು.

## ಜ್ಞಾನ - ಕರ್ಮ ಸಮುಚ್ಚಯ

ಸ್ಥಿತಪ್ರಜ್ಞನಾದ ಜ್ಞಾನಿಯ ಲಕ್ಷಣಗಳನ್ನು ಕೇಳಿ ಅರ್ಜುನನು ತುಂಬ ಪ್ರಭಾವಿತನಾಗುತ್ತಾನೆ. ಎಲ್ಲವನ್ನೂ ಬಿಟ್ಟು ಆ ಅವಸ್ಥೆಯಲ್ಲಿಯೇ ಸದಾ ನೆಲೆಸಿರಬೇಕು ಎಂಬ ತೀವ್ರ ಆಕಾಂಕ್ಷೆ ಬಹುಶಃ ಅವನಲ್ಲುಂಟಾಗುತ್ತದೆ. ಆಗ ಅವನಿಗೆ ಕರ್ಮ ಘೋರವೆನಿಸುತ್ತದೆ. ಸ್ಥಿತಪ್ರಜ್ಞಾವಸ್ಥೆ ಮತ್ತು ಕರ್ಮ – ಇವು ಪರಸ್ಪರ ವಿರುದ್ಧ ಎಂದೆನಿಸುತ್ತದೆ ಅವನಿಗೆ. ಒಂದು ನಿಶ್ಚಲಸ್ಥಿತಿ, ಇನ್ನೊಂದು ಚಲನಶೀಲ ಸ್ಥಿತಿ; ಒಂದು ಸ್ಥಿರಾವಸ್ಥೆ, ಇನ್ನೊಂದು ಅಸ್ಥಿರಾವಸ್ಥೆ; ಒಂದು ದ್ವಂದ್ವಾತೀತ ಸ್ಥಿತಿ, ಇನ್ನೊಂದು ದ್ವಂದ್ವಗಳ ನೆಲೆವೀಡು; ಒಂದು ಆನಂದಾವಸ್ಥೆ, ಇನ್ನೊಂದು ದುಃಖದ 'ಅವಸ್ಥೆ'; ಒಂದು ಶಾಂತ, ಇನ್ನೊಂದು ಅಶಾಂತ; ಒಂದು ಅಂತರ್ಮುಖ, ಇನ್ನೊಂದು ಬಹಿರ್ಮುಖ; ಒಂದು ಆತ್ಮನಿಷ್ಠ ಸ್ಥಿತಿ, ಇನ್ನೊಂದು ವಸ್ತುನಿಷ್ಠ ಸ್ಥಿತಿ. ಹೀಗಿರುವಾಗ ಸ್ಥಿತಪ್ರಜ್ಞಾವಸ್ಥೆ ಮತ್ತು ಕಾರ್ಯತತ್ಪರತೆ ಪರಸ್ಪರ ವಿರುದ್ಧವಾಗಿ ಕಂಡುಬರುವುದು ಸ್ವಾಭಾವಿಕ. ಆದ್ದರಿಂದಲೇ ಅರ್ಜುನನು, "ಆತ್ಮಜ್ಞಾನವೇ ಶ್ರೇಷ್ಠವೆಂದಾದರೆ ನನ್ನನ್ನು ಕರ್ಮದಲ್ಲಿ ಏಕೆ ತೊಡಗಿಸುತ್ತಿದ್ದೀಯೆ?" ಎಂದು ಶ್ರೀಕೃಷ್ಣನನ್ನು ಕೇಳುತ್ತಾನೆ (ಗೀತಾ, ೩ : ೧).

ಪ್ರಾರಂಭಾವಸ್ಥೆಯಲ್ಲಿ ಕರ್ಮ ಮತ್ತು ಧ್ಯಾನ – ಇವೆರಡೂ ಪರಸ್ಪರ ವಿರುದ್ಧವಾಗಿ ಕಂಡುಬರುತ್ತವೆ. ಧ್ಯಾನವೆಂದರೆ ಹಂತ ಹಂತವಾಗಿ ಕರ್ಮದಿಂದ ನಿವೃತ್ತಿಹೊಂದುವುದು. ನಾವು ಧ್ಯಾನಕ್ಕೆ ಕುಳಿತಾಗ ಮೊದಲು ದೈಹಿಕ ಚಟುವಟಿಕೆಗಳನ್ನು ನಿಲ್ಲಿಸುತ್ತೇವೆ. ಅನಂತರ ಇಂದ್ರಿಯ ಚಟುವಟಿಕೆಗಳನ್ನು ಕಡಿಮೆ ಮಾಡುತ್ತೇವೆ. ಮುಂದೆ ಮನಸ್ಸಿನ ಚಲನೆಯನ್ನು ಹಂತಹಂತವಾಗಿ ನಿಲ್ಲಿಸುತ್ತೇವೆ. ಇದೇ ರೀತಿ ಮುಂದುವರಿದು ಮನಸ್ಸಿನ ಚಟುವಟಿಕೆ ಸಂಪೂರ್ಣ ನಿಂತಾಗ ನೀರಿನ ಅಲೆಗಳೆಲ್ಲ ನಿಂತಾಗ ಕೊಳದ ತಳಭಾಗ ಕಾಣಿಸುವಂತೆ, ಆತ್ಮದ ಅಸ್ತಿತ್ವದ ಅರಿವಾಗುತ್ತದೆ. ಆದ್ದರಿಂದ ಧ್ಯಾನವೆಂದರೆ ಏನೂ ಮಾಡದೆ ಇರುವುದು. "ಆತ್ಮನನ್ನು ಪಡೆಯುವುದಕ್ಕೆ ಏನು ಮಾಡಬೇಕು?" ಎಂದು ಶ್ರೀ ರಮಣಮಹರ್ಷಿಗಳನ್ನು ಒಬ್ಬರು ಕೇಳಿದಾಗ ಅವರು ಹೇಳಿದರಂತೆ, "ಸುಮ್ಮನಿರಬೇಕು" ಎಂದು. ಆದ್ದರಿಂದ ನಾವು ಸಂಪೂರ್ಣ ಸುಮ್ಮನಿದ್ದಾಗ ಆತ್ಮಜ್ಞಾನ ಉಂಟಾಗುತ್ತದೆ. ಈ ದೃಷ್ಟಿಯಿಂದ ಕರ್ಮ ಮತ್ತು ಜ್ಞಾನ ಪರಸ್ಪರ ವಿರುದ್ಧವಾದವುಗಳು.

ಇನ್ನೊಂದು ದೃಷ್ಟಿಯಿಂದ ನೋಡಿದರೆ ಆತ್ಮತತ್ತ್ವವು ಕರ್ಮದಿಂದ ಪಡೆಯುವ ವಸ್ತುವಲ್ಲ. ಇದು 'ಸಿದ್ಧ' ವಸ್ತು, 'ಸಾಧ್ಯ' ವಲ್ಲ. ಕರ್ಮವು ಭೌತಿಕವಾದುದರಿಂದ ಅಭೌತಿಕವಾದುದನ್ನು ಅದರಿಂದ ಪಡೆಯಲಾಗುವುದಿಲ್ಲ. ಕರ್ಮದಿಂದ ಭೌತಿಕವಾದುದನ್ನು ಮಾತ್ರ ಸಾಧಿಸಬಹುದು. ನಮ್ಮ ಶಾಸ್ತ್ರದ ಪ್ರಕಾರ ಕರ್ಮದಿಂದ ನಾಲ್ಕು ಬಗೆಯ ಸಾಧನೆಯು ಸಾಧ್ಯವಾಗುತ್ತದೆ. ಒಂದು **ಆಪ್ಯ** – ಒಂದು ಪ್ರದೇಶವನ್ನೊ, ವಸ್ತುವನ್ನೊ ಅಥವಾ ವ್ಯಕ್ತಿಯನ್ನೊ ಅದರೆಡೆಗೆ ಹೋಗುವ ಕರ್ಮದ ಮೂಲಕ ಪಡೆಯಬಹುದು. ಇನ್ನೊಂದು **ಉತ್ಪಾದ್ಯ** – ಕರ್ಮದ ಮೂಲಕ ಒಂದು ಹೊಸ ವಸ್ತುವನ್ನು ಉತ್ಪಾದಿಸಬಹುದು. ಮೂರನೆಯದು **ವಿಕಾರ್ಯ** – ಕರ್ಮದ ಮೂಲಕ ಒಂದು ವಸ್ತುವಿನ ರೂಪವನ್ನು ಬದಲಾಯಿಸಬಹುದು. ಪ್ಲಾಸ್ಟಿಕ್ ಸರ್ಜರಿಯ ಮೂಲಕ ಮುದುಕನನ್ನು ಯುವಕನನ್ನಾಗಿ ಮಾಡಬಹುದು. ಕೊನೆಯದಾಗಿ **ಸಂಸ್ಕಾರ್ಯ** – ಕೊಳೆಯ ಬಟ್ಟೆಯನ್ನು ಶುದ್ಧಗೊಳಿಸಬಹುದು, ದುಷ್ಟನನ್ನು ಶಿಷ್ಟನನ್ನಾಗಿ ಮಾಡಬಹುದು. ಆದರೆ ಆತ್ಮತತ್ತ್ವವು ಈ ನಾಲ್ಕು